# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸಕಾಅ/ವಾ.ನಂ.39/ಪಿಆರ್/03/2022-23

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗ, ದಾಸರಹಳ್ಳಿ ವಲಯ
ಹೆಚ್.ಎಂ.ಟಿ.ಬಡಾವಣೆ, ನಾಗಸಂದ್ರ ಪೋಸ್ಟ್
ಬೆಂಗಳೂರು, ದಿನಾಂಕ : 10-05-2022

## ವಾರ್ಡ್ -39ರ ವಾರ್ಡ್ ಸಭೆಯ ನಡವಳಿ

ದಿನಾಂಕ:-10-05-2022 ರಂದು ಪೀಣ್ಯ ಕೈಗಾರಿಕ ಪ್ರದೇಶ ಉಪ ವಿಭಾಗ ವಾರ್ಡ್ ನಂ.39 ರ ವಾರ್ಡ್ ಕಛೇರಿಯಲ್ಲಿ ಶ್ರೀ.ಪುಟ್ಟಸ್ವಾಮಿ ಜೆ, ವಾರ್ಡ್-39 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದ್ದವರು:

1. ಶ್ರೀ ಪುಟ್ಟಸ್ವಾಮಿ ಜೆ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
2. ಶ್ರೀಮತಿ.ಅರ್ಚನ ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ
3. ಶ್ರೀ ಹೆಚ್.ರಮೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಸದಸ್ಯರು
4. ಡಿ.ಆರ್.ಮಾಳಯ್ಯ, ನೀರು ಸರಬರಾಜು ಸಹಾಯಕರು ವಾ.ನಂ.39
5. ರಮೇಶ್.ಟಿ. ನೀರು ಸರಬರಾಜು ಸಹಾಯಕರು ವಾ.ನಂ.39
6. ಕಿರಣ್ ವಿ. ಸಹಾಯಕ ಅಭಿಯಂತರರು, ಬಿಡಬ್ಲ್ಯುಎಸ್ಎಸ್‌ಬಿ
7. ಶ್ರೀ.ರಾಮಕೃಷ್ಣ ಕಂದಾಯ ಪರಿವೀಕ್ಷಕರು ವಾ.ನಂ.39
8. ಶ್ರೀ ಶ್ರೀನಿವಾಸ ಕೆ ನೀರು ಸರಬರಾಜು ಸಹಾಯಕರು ವಾ.ನಂ.39ಬಿಡಬ್ಲ್ಯುಎಸ್ಎಸ್‌ಬಿ
9. ಶ್ರೀಮತಿ ಸ್ವಪ್ನ ಎಸ್ ಸಹಾಯಕ ಅಭಿಯಂತರರು, ಬಿಡಬ್ಲ್ಯುಎಸ್ಎಸ್‌ಬಿ
10. ಶ್ರೀಮತಿ ಧನಲಕ್ಷ್ಮೀ ಪಿ ವೆಲ್ಫೇರ್ ಸೇಕರೇಟರಿ
11. ಶ್ರೀ ಸುಭಾಷ್ ಶೆಟ್ಟಿ ಬಿಬಿಎಂಪಿ ವಾರ್ಡ ಕಮಿಟಿ ಸದಸ್ಯರು
12. ಶ್ರೀಮತಿ ಸಿ. ಗಾಯಿತ್ರಿ ಸದಸ್ಯರು
13. ಶ್ರೀ ಮುನಿರಾಜು ದಲಿತ ಬಹುಜನ ಚಳುವಳಿ
14. ವೆಂಕಟೇಶ್ ಎಂ. ದಲಿತ ಬಹುಜನ ಚಳುವಳಿ
15. ಶಶಿಕಾಂತ್ ಡಿ.ಜೆ ದಲಿತ ಬಹುಜನ ಚಳುವಳಿ
16. ಲಕ್ಕಪ್ಪ ದಲಿತ ಬಹುಜನ ಚಳುವಳಿ

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು

- ವಾರ್ಡ್ ಸಮಿತಿ ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳು ಓದಿ ರೆಕಾರ್ಡ್ ಮಾಡಲಾಯಿತು ಅದರಂತೆ ವಾರ್ಡ ಕಮಿಟಿ ಜವಬ್ದಾರಿಯ ಬಗ್ಗೆ ಸದಸ್ಯ ಕಾರ್ಯದರ್ಶಿ ರವರೊಂದಿಗೆ ಚರ್ಚಿಸಲಾಯಿತು.
- ಅಧ್ಯಕ್ಷರು ವಾರ್ಡ ಕಮಿಟಿ ಸಭೆಗೆ ಸದಸ್ಯರುಗಳನ್ನು ಸೇರಿಸಲು ಸೂಚಿಸಲಾಗಿ ಅದರಂತೆ ವಾಟ್ಸಪ್ ಗ್ರೂಪಿಗೆ ಸೇರಿಸಲಾಯಿತು.
- ಅಧ್ಯಕ್ಷರು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಸಮಸ್ಯೆಗಳ ಬಗ್ಗೆ ಚರ್ಚಿಸುವಂತೆ ಹಾಗೂ ಕ್ರಮ ಕೈಗೊಳ್ಳುವಂತೆ ಸದಸ್ಯ ಕಾರ್ಯದರ್ಶಿರವರಿಗೆ ಸೂಚಿಸಲಾಯಿತು.
- ಅಧ್ಯಕ್ಷರು ವಾರ್ಡ ನಂ.39 ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಜನ ಸಂಖ್ಯೆ ವಿವರಗಳನ್ನು ನೀಡುವಂತೆ ಕಾರ್ಯದರ್ಶಿರವರಿಗೆ ಸೂಚಿಸಲಾಯಿತು.
- ಅಧ್ಯಕ್ಷರು ವಾರ್ಡ ನಂ.39 ಸಾರ್ವಜನಿಕರ ಮೂಲಭೂತ ಸೌಲಭ್ಯಗಳ ವಿವರಗಳನ್ನು ಪಟ್ಟಿಮಾಡುವಂತೆ ಕಾರ್ಯದರ್ಶಿರವರಿಗೆ ಸೂಚಿಸಲಾಯಿತು.
- ಮುನಿರಾಜುರವರು 10 ವರ್ಷದ ಹಿಂದೆ ನಡೆದ ಕಾಮಗಾರಿಯನ್ನು ಹಾಗೂ ಅದರ ವಿವರಗಳನ್ನು ನೀಡುವಂತೆ ಕೇಳಲಾಗಿ ಕಾರ್ಯದರ್ಶಿರವರು ನೀಡುವುದಾಗಿ ಹೇಳಿದರು.
- ಪಿ. ಧನಲಕ್ಷ್ಮಿ ರವರು 10 ವರ್ಷದ ವೆಲ್ಫರ್ ಸ್ಕಿಮ್‌ನಡಿಯಲ್ಲಿ ಉಳಿದವರು ಬ್ಯಾಲನ್ಸ್‌ನ ವಿವರ ನೀಡುವಂತೆ ಕೇಳಲಾಗಿ ಕಾರ್ಯದರ್ಶಿರವರು ನೀಡುವುದಾಗಿ ಹೇಳಿದರು.

- ವೆಂಕಟೇಶ್ ರವರು 2022-2023 ನೇ ಸಾಲಿನ ಮಂಜೂರಾದ ಕಾಮಗಾರಿಗಳ ವಿವರಗಳನ್ನು ನೀಡುವಂತೆ ಕೇಳಲಾಗಿ ಕಾರ್ಯದರ್ಶಿರವರು ನೀಡುವುದಾಗಿ ಹೇಳಿದರು.
- ಮುನಿರಾಜುರವರು ಬಿ.ಸಿ.ಎಮ್ ಪ್ರೋಗ್ರೇಸ್ ರಿಪೋರ್ಟ್ ನೀಡುವಂತೆ ಕೇಳಲಾಗಿ ಕಾರ್ಯದರ್ಶಿರವರು ನೀಡುವುದಾಗಿ ಹೇಳಿದರು
- ಮುನಿರಾಜುರವರು ಕಾಮಗಾರಿ ಇಲಾಖೆಯಿಂದ ಮಂಜೂರಾದ ಒಂಟಿಮನೆಗಳ ವಿವರಗಳನ್ನು ನೀಡುವಂತೆ ಕೇಳಲಾಗಿ ಕಾರ್ಯದರ್ಶಿರವರು ನೀಡುವುದಾಗಿ ಹೇಳಿದರು
- ಅಧ್ಯಕ್ಷರು ರಾಜಕಾಲುವೆ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳನ್ನು ವಾರ್ಡ್ ಕಮಿಟಿಗೆ ಬರುವಂತೆ ಸೂಚಿಸಬೇಕೆಂದು ಸದಸ್ಯ ಕಾರ್ಯದರ್ಶಿರವರಿಗೆ ಸೂಚಿಸಲಾಯಿತು.
- ಅಧ್ಯಕ್ಷರು ಪೌರಕಾರ್ಮಿಕರು, ಆಟೋ, ಟಿಪ್ಪರ್, ವಾರ್ಡ್ ನಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಖ್ಯೆ ಮತ್ತು ಸಂಪೂರ್ಣ ವಿವರಗಳನ್ನು ನೀಡುವಂತೆ ರಮೇಶ ಹಿರಿಯ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು.
- ಸದಸ್ಯ ಕಾರ್ಯದರ್ಶಿ ರವರು ಬಿ.ಡಬ್ಲ್ಯು.ಎಸ್.ಎಸ್.ಬಿ ಮತ್ತು ಬೆಸ್ಕಾಂ ಇಲಾಖೆಯವರು ವಾರ್ಡ್ ರಸ್ತೆಗಳನ್ನು ಅನಧಿಕೃತವಾಗಿ ಅಗೆಯುತ್ತಿದ್ದು ಅದನ್ನು ಸರಿಯಾಗಿ ರಿಸ್ಟೋರೇಷನ್ ಮಾಡುತ್ತಿಲ್ಲ ಆದರಿಂದ ಸಾರ್ವಜನಿಕರಿಗೆ ರಸ್ತೆಯಲ್ಲಿ ಸಂಚರಿಸಲಾಗುತ್ತಿಲವೆಂದು ಸರಿಯಾದ ಕ್ರಮ ಕೈಗೊಳ್ಳುವಂತೆ ತಿಳಿಸಿದರು.
- ಮುಂದಿನ ಸಭೆಗೆ ಎಲ್ಲಾ ಕಛೇರಿಯ ಅಧಿಕಾರಿಗಳು ಹಾಜರಾಗುವಂತೆ ಹಾಗೂ ಗೈರು ಹಾಜರಾದವರಿಗೆ ನೋಟಿಸ್ ನೀಡುವಂತೆ ನೋಡೆಲ್ ಅಧಿಕಾರಿಯವರು ಸಭೆಯಲ್ಲಿ ತಿಳಿಸಿದರು.
- ಮೇಲ್ಕಂಡ ಎಲ್ಲಾ ವಿವರಗಳನ್ನು ತಮ್ಮ ತಮ್ಮ ಇಲಾಖೆಗೆ ಸಂಬಂಧಪಟ್ಟ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಮಾಹಿತಿಯೊಂದಿಗೆ ಹಾಜರಾಗಲು ನೋಡಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರೂ.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 39 ಚೊಕ್ಕಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

10/5/2022
ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ. 39 ಚೊಕ್ಕಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಧಿಕಾರಿಗಳ ಮಾಹಿತಿಗಾಗಿ

1.ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2.ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3.ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
4.ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
5.ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೀ.ಕೈ.ಪ್ರ)ರವರ ಮಾಹಿತಿಗಾಗಿ ಕಳುಹಿಸಿದೆ
6.ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರ ಮಾಹಿತಿಗಾಗಿ ಕಳುಹಿಸಿದೆ
7.ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) ರವರ ಮಾಹಿತಿಗಾಗಿ ಕಳುಹಿಸಿದೆ
8.ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB)ರವರ ಮಾಹಿತಿಗಾಗಿ ಕಳುಹಿಸಿದೆ
9.ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಕಳುಹಿಸಿದೆ
10.ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ
11.ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಎನ್-5 ಪೀಣ್ಯ ರವರ ಮಾಹಿತಿಗಾಗಿ ಕಳುಹಿಸಿದೆ